ಪ್ರತಿಬಿಂಬ

**PRATIBIMBA –** **Multidisciplinary Kannada Research Journal of IIMRD**
**ISSN: 2582-2284**
**Vol-2 Issue 2, Sep-Oct 2020, 1-10**
**©*IIMRD*, Mysuru**

IIMRD JOURNALS

**www.iimrd.com**

# ರೈತರ ಆತ್ಮಹತ್ಯೆ: ಕಾರಣ ಮತ್ತು ಪರಿಹಾರಗಳು

**ಆನಂದ ಎಸ್.[1] ಮತ್ತು ಡಾ. ನಾಗರತ್ನಮ್ಮ ಎಸ್.[2]**

**ಪೀಠಿಕೆ**

"ಒಕ್ಕಲಿಗ ಒಕ್ಕದಿರೆ ಬಿಕ್ಕುವುದು ಜಗವೆಲ್ಲ" ಎಂದು ಕೃಷಿಕರ ಮಹತ್ವ ಕುರಿತಂತೆ ಅಂದು ಸರ್ವಜ್ಞ ಹೇಳಿರುವ ಮಾತು ಇಂದಿಗೂ ಪ್ರಸ್ತುತವೆನಿಸಿದೆ. ಭಾರತ ದೇಶ ರೈತರ ನಾಡು, ಕೃಷಿಕರ ಬೀಡು. ಈ ದೇಶದ ಹಳ್ಳಿಗಳಲ್ಲಿ ವಾಸಿಸುತ್ತಿರುವವರಲ್ಲಿ ಬಹುತೇಕರು ಬಡವರು. ಇವರ ಪ್ರಧಾನ ಕಸುಬು ಕೃಷಿ ಅಥವಾ ವ್ಯವಸಾಯ. ಕೃಷಿ ಮಾನವ ಜನಾಂಗದ ವಿಕಾಸದೊಂದಿಗೆ ಬೆಳೆದು ಬಂದಿರುವ ಒಂದು ಔದ್ಯೋಗಿಕ ಚಟುವಟಿಕೆ. ಇದು ಬಹುತೇಕ ಜೀವರಾಶಿಗಳ ಜೀವನಾಧಾರ. ದೇಶದ ಆರ್ಥಿಕತೆಗೆ ಇದರ ಕೊಡುಗೆ ಅಪಾರ. ಜನತೆಗೆ ಆಹಾರ, ಜಾನುವಾರುಗಳಿಗೆ ಮೇವು, ಕೈಗಾರಿಕೆಗಳಿಗೆ ಕಚ್ಚಾವಸ್ತು ಹಾಗೂ ವ್ಯಾಪಾರ ವಹಿವಾಟಿಗೂ ಕೃಷಿಯೇ ಮೂಲಾಧಾರ.

ಭಾರತದಲ್ಲಿ ಹಲವಾರು ರಾಜರು ಆಳಿ–ಅಳಿದು ಅನೇಕ ಚಕ್ರಾಧಿಪತ್ಯಗಳು ಏರಿ–ಉರುಳಿದರೂ ರೈತರು ಮಾತ್ರ ತಾವು ಕೊಡಬೇಕಾದ ಕಂದಾಯವನ್ನು ತಪ್ಪದೇ ಸಲ್ಲಿಸುತ್ತಿದ್ದರು. ಹೀಗಾಗಿ ಹಿಂದಿನ ರಾಜ ಮಹಾರಾಜರ ಬೊಕ್ಕಸ ಮತ್ತು ಇಂದಿನ ಸರ್ಕಾರಗಳ ಖಜಾನೆಗಳಿಗೆ ರೈತ ನೀಡುವ ತೆರಿಗೆಯೇ ಪ್ರಧಾನ ಆದಾಯದ ಮೂಲವಾಗಿದೆ.[1] ಆದುದರಿಂದ ಕೃಷಿಯನ್ನು ಭಾರತದ ಆರ್ಥಿಕತೆಯ ಬೆನ್ನೆಲುಬು ಎಂದು ಕರೆದಿರುವುದು ಸೂಕ್ತವಾಗಿಯೇ ಇದೆ. ಆದರೆ ಇತ್ತೀಚಿನ ದಿನಗಳಲ್ಲಿ ಕೃಷಿ ನಿರ್ಲಕ್ಷಕ್ಕೊಳಗಾಗಿದ್ದು ರೈತ ಅನ್ನದಾತ, ಕೃಷಿ ದೇಶದ ಬೆನ್ನೆಲುಬು ಎಂಬುದು ಕೇವಲ ತೋರ್ಪಡಿಕೆಯ ಮಾತುಗಳಾಗಿವೆ. ತನ್ನೆಲ್ಲಾ ಕಷ್ಟ ಕಾರ್ಪಣ್ಯಗಳ ಮಧ್ಯೆ ಬಿಸಿಲು, ಬಿರುಗಾಳಿ ಮಳೆಗಳ ನಡುವೆಯೂ ಭೂಮಿಯ ಮೇಲಿನ ತನ್ನ ಅಚಲ ನಂಬಿಕೆ ಕಳೆದುಕೊಳ್ಳದ ಈ ದೇಶದ ರೈತ, ತಾನು ಬೆಳೆದದ್ದನ್ನು ಇತರರೊಂದಿಗೆ ಹಂಚಿಕೊಂಡು ಉಣ್ಣುತ್ತಾ ಬಡತನದ ನಡುವೆಯೂ ಘನತೆಯ ಬದುಕನ್ನು ಕಟ್ಟಿಕೊಂಡು ಬದುಕಿದವನು. ಆದರೆ ಈ ದೇಶದ ಕೃಷಿ ಇತಿಹಾಸದಲ್ಲೇ ಇಂದು ರೈತರು ಕೃಷಿಯಿಂದ ಬದುಕುವ ಭರವಸೆಯನ್ನೇ ಕಳೆದುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಹೀಗಾಗಿಯೇ ಕೃಷಿವಲಯಕ್ಕೆ ವಿದಾಯ ಹೇಳುತ್ತಿರುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಆರಂಭದಲ್ಲಿ ಶೇ.85ರಷ್ಟು ರೈತರು ಕೃಷಿಯನ್ನು ಅವಲಂಬಿಸಿದ್ದರು. ದೇಶಕ್ಕೆ ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ ಶೇ.70ರಷ್ಟು ಮಂದಿ ಕೃಷಿಯನ್ನು ಅವಲಂಬಿಸಿದ್ದರು. ಅಂದು ದೇಶದ ಒಟ್ಟು ಆಂತರಿಕ ಉತ್ಪನ್ನದಲ್ಲಿ (ಜಿ.ಡಿ.ಪಿ.)

---

[1] *ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಕಲಾ ಕಾಲೇಜು, ಬೆಂಗಳೂರು–01.*

[2] *ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.56.*

ಕೃಷಿಯ ಪಾಲು ಶೇ.52ರಷ್ಟಿತ್ತು. ಇಂದು ಕೃಷಿ ಅವಲಂಬಿತರ ಸಂಖ್ಯೆ ಇಳಿಮುಖವಾಗಿದ್ದು ಜಿ.ಡಿ.ಪಿ.ಯ ಪಾಲು ಶೇ.14ಕ್ಕೆ ಇಳಿಕೆಯಾಗಿರುವುದನ್ನು ಸೂಕ್ಷ್ಮವಾಗಿ ಗಮನಿಸಿದರೆ ಇಂದು ಈ ದೇಶದ ಕೃಷಿ ಕ್ಷೇತ್ರ ಸಂಕಷ್ಟದಲ್ಲಿರುವುದು ತಿಳಿಯುತ್ತದೆ. ಭಾರತವು ಜಾಗತೀಕರಣ ಪ್ರಕ್ರಿಯೆಗೆ ಒಳಪಟ್ಟ ನಂತರ ದೇಶದ ಕೃಷಿಕ್ಷೇತ್ರ ಮತ್ತಷ್ಟು ಅಪಾಯಕ್ಕೆ ಸಿಲುಕಿದೆ. ಒಪ್ಪಂದದನ್ವಯ ಭಾರತದ ಕೃಷಿ ಮಾರುಕಟ್ಟೆಯನ್ನು ಸಂಪೂರ್ಣವಾಗಿ ಮುಕ್ತಮಾರುಕಟ್ಟೆಗೆ ತೆರೆದಿಡಲಾಗಿದೆ. ಹೀಗಾಗಿ ವಿದೇಶಿ ಉತ್ಪನ್ನಗಳ ಮುಂದೆ ಸ್ಥಳೀಯ ಕೃಷಿ ಉತ್ಪನ್ನಗಳು ಸ್ಪರ್ಧಿಸಲಾರದೆ ಬೆಲೆ ಕುಸಿತ ಕಂಡಿದೆ. ವಿದೇಶಿ ಬಂಡವಾಳದ ಮುಕ್ತ ಪ್ರವೇಶ, ಬಹುರಾಷ್ಟ್ರೀಯ ಕಂಪನಿಗಳ ಪ್ರಭಾವದ ಹೊಡೆತಕ್ಕೆ ಸಿಲುಕಿ ಭಾರತದ ಕೃಷಿಕರು ತತ್ತರಿಸಿ ಹೋಗಿದ್ದಾರೆ. ಇಂದು ದಿನದಿಂದ ದಿನಕ್ಕೆ ಕೃಷಿ ವೆಚ್ಚವು ಹೆಚ್ಚುತ್ತಿದ್ದು ಲಾಭದ ನಿರೀಕ್ಷೆ ಸುಳ್ಳಾಗಿದೆ. ಕೃಷಿಯೆಂಬುದು ನಷ್ಟದ ಉದ್ಯೋಗ, ದಡ್ಡರ ಆಯ್ಕೆ ಎಂಬ ಭಾವನೆ ಹೆಚ್ಚುತ್ತಿದೆ. ಸಾಲ ಮಾಡಿ ಬೇಸಾಯ ಮಾಡುವ ರೈತರು ನಷ್ಟ ಅನುಭವಿಸಿದ್ದಲ್ಲಿ ಸಾಲ ಭರಿಸುವ ಬೇರೊಂದು ದಾರಿ ಕಾಣದೆ ಮಾನ-ಅಪಮಾನದ ಭಯದಿಂದ ಒತ್ತಡಕ್ಕೆ ಸಿಲುಕಿ ಆತ್ಮಹತ್ಯೆಯ ಹಾದಿ ಹಿಡಿಯುತ್ತಿದ್ದಾರೆ. ಆದುದರಿಂದಲೇ ಇಂದು ಬೇಸಾಯ ಕುರಿತಂತೆ "ಬೇಸಾಯ, ನಾ-ಸಾಯ ನೀ-ಸಾಯ, ಮನೆಮಂದಿಯೆಲ್ಲಾ ಸಾಯ" ಎಂಬ ಮಾತು ಜನಜನಿತವಾಗಿದೆ.[2]

ಹಾಗೆಂದ ಮಾತ್ರಕ್ಕೆ ಭಾರತವು ಜಾಗತೀಕರಣ ವ್ಯಾಪ್ತಿಗೆ ಒಳಪಡುವ ಮುನ್ನ ಈ ದೇಶದಲ್ಲಿ ರೈತರ ಆತ್ಮಹತ್ಯೆಗಳಿರಲಿಲ್ಲ ಎಂದರ್ಥವಲ್ಲ. ರೈತರ ಆತ್ಮಹತ್ಯೆ ಹಿಂದೆ ಕೂಡ ಇತ್ತು. ಆದರೆ ಇಷ್ಟೊಂದು ದೊಡ್ಡಸಂಖ್ಯೆಯಲ್ಲಿರಲಿಲ್ಲ. ತೊಂಬತ್ತರ ದಶಕದ ಎಲ್.ಪಿ.ಜಿ. ನೀತಿಗಳು ಭಾರತದ ರೈತರ ಬದುಕಿಗೆ ಮಾರಕವಾಗಿವೆ. ಈ ಹೊಸ ಆರ್ಥಿಕ ನೀತಿಗಳು ಬರುವ ಮುನ್ನ ರೈತರ ಮಾರುಕಟ್ಟೆ ವ್ಯವಹಾರ ಕೇವಲ ಊರಸಂತೆ, ಸಹಕಾರಿ ಕೃಷಿ ಉತ್ಪನ್ನ ಮಾರುಕಟ್ಟೆ, ತಾಲ್ಲೂಕು ಕೇಂದ್ರದ ಸಗಟು ವ್ಯಾಪಾರಿಗಳಿಗೆ ಸೀಮಿತವಾಗಿತ್ತು. ಕೃಷಿಯಲ್ಲಿ ಕಾಣುತ್ತಿದ್ದ ಏರುಪೇರುಗಳಿಗೂ ಅವರು ವ್ಯವಹರಿಸುತ್ತಿದ್ದ ಮಾರುಕಟ್ಟೆಯ ಏರುಪೇರುಗಳಿಗೂ ಅಂತಹ ವಿಶೇಷ ವ್ಯತ್ಯಾಸವಿರಲಿಲ್ಲ. ಆದರೆ ತೊಂಬತ್ತರ ಆರ್ಥಿಕ ನೀತಿಗಳು ಸಣ್ಣಪುಟ್ಟ ಕೊಳದಲ್ಲಿ ಈಜುತ್ತಿದ್ದವರನ್ನು ದಿಢೀರನೆ ಸಮುದ್ರಕ್ಕೆ ಎತ್ತಿ ಬಿಸಾಡಿದ ಅನುಭವವನ್ನು ರೈತರಿಗೆ ನೀಡುತ್ತಿವೆ. ಈ ಬದಲಾವಣೆಯನ್ನು ಸುಲಭವಾಗಿ ಜೀರ್ಣಿಸಿಕೊಳ್ಳಲಾಗದ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ ಎಂಬ ಭಾವನೆ ಬಲವಾಗಿದೆ.[3]

ಭಾರತದಲ್ಲಿ ಜಾಗತೀಕರಣದ ನೀತಿಗಳಿಂದಾಗಿ ರೈತರ ಆತ್ಮಹತ್ಯೆ ಪ್ರಕರಣಗಳು ಹೆಚ್ಚಾಗಿರುವುದನ್ನು ಆತ್ಮಹತ್ಯೆಗೆ ಸಂಬಂಧಿಸಿದಂತೆ ಇರುವ ಅಂಕಿ-ಅಂಶಗಳು ಸಮರ್ಥಿಸುತ್ತವೆ. ಹೊಸ ಆರ್ಥಿಕ ನೀತಿಗಳು ಬರುವ ಮುನ್ನ ಒಂದು ಲಕ್ಷ ಜನಸಂಖ್ಯೆಗೆ 5ರ ಆಸುಪಾಸಿನಲ್ಲಿದ್ದ ರೈತರ ಆತ್ಮಹತ್ಯೆ ತೊಂಬತ್ತರ ಕೊನೆಗೆ 14ಕ್ಕೆ, 2005ರಲ್ಲಿ 15ಕ್ಕೆ ಮತ್ತು 2011ರ ವೇಳೆಗೆ 16ಕ್ಕೆ ಏರಿದೆ. ತೊಂಬತ್ತರ ದಶಕದಿಂದಲೇ ಹೊಸ ಆರ್ಥಿಕ ನೀತಿಗಳನ್ನು ಮಹಾರಾಷ್ಟ್ರ, ಕರ್ನಾಟಕ, ಆಂಧ್ರಪ್ರದೇಶ ಹಾಗೂ ಮಧ್ಯಪ್ರದೇಶ ರಾಜ್ಯಗಳು ಅಳವಡಿಸಿಕೊಂಡಿದ್ದು ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ ಕೂಡ ಈ ರಾಜ್ಯಗಳಲ್ಲಿ ಹೆಚ್ಚಿದೆ. 1999ರಲ್ಲಿ ಈ ನಾಲ್ಕು ರಾಜ್ಯಗಳಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ ಒಟ್ಟು ಆತ್ಮಹತ್ಯೆಯ ಶೇ.58ರಷ್ಟಿದ್ದರೆ 2013ರಲ್ಲಿ ಇದು ಶೇ.69ಕ್ಕೆ ಏರಿದೆ. ಆತ್ಮಹತ್ಯೆ ಹೆಚ್ಚಲು ಎಲ್.ಪಿ.ಜಿ. ನೀತಿಗಳು ಕಾರಣ ಎನ್ನುವುದನ್ನು ಆತ್ಮಹತ್ಯೆ ಮಾಡಿಕೊಂಡವರ ಹಿನ್ನೆಲೆಗೆ ಸಂಬಂಧಿಸಿದ ಅಂಕಿ-ಅಂಶಗಳು ಕೂಡ ಸಮರ್ಥಿಸುತ್ತವೆ.

ಆತ್ಮಹತ್ಯೆ ಮಾಡಿಕೊಂಡವರಲ್ಲಿ ಶೇ.28ರಷ್ಟು ಅತೀ ಸಣ್ಣ ರೈತರಾದರೆ ಶೇ.45ರಷ್ಟು ಸಣ್ಣ ರೈತರಿದ್ದು ಒಂದು ಲಕ್ಷಕ್ಕಿಂತ ಕಡಿಮೆ ಆದಾಯ ಇರುವವರು ಆತ್ಮಹತ್ಯೆ ಮಾಡಿಕೊಂಡವರಲ್ಲಿ ಶೇ.70ರಷ್ಟಿದ್ದಾರೆ. ಉಳಿದ ಶೇ.30ರಷ್ಟು ರೈತರೂ ಕೂಡ ಶ್ರೀಮಂತರಲ್ಲ. ಅವರ ಆದಾಯ ಒಂದು ಲಕ್ಷಕ್ಕಿಂತ ಹೆಚ್ಚಿದೆ. ಆದರೆ ಐದು ಲಕ್ಷಕ್ಕಿಂತ ಕಡಿಮೆ ಇದೆ. ಹೈಸ್ಕೂಲು ಮತ್ತು ಅದಕ್ಕಿಂತಲೂ ಕಡಿಮೆ ಶಿಕ್ಷಣ ಹೊಂದಿದವರು ಆತ್ಮಹತ್ಯೆ ಮಾಡಿಕೊಂಡವರಲ್ಲಿ ಶೇ.74ರಷ್ಟಿದ್ದಾರೆ.[4]

ಇತ್ತೀಚಿನ ದಿನಗಳಲ್ಲಿ ಭಾರತದಲ್ಲಿ ರೈತರ ಆತ್ಮಹತ್ಯೆಯ ಪ್ರಕರಣಗಳು ಹೆಚ್ಚಾಗುತ್ತಿವೆ. ಇಂದು ದೇಶದಾದ್ಯಂತ ದಿನನಿತ್ಯ ಕೇಳಿಬರುವ ಸುದ್ದಿಗಳಲ್ಲಿ ರೈತರ ಸಾವಿನ ಸುದ್ದಿಯೂ ಒಂದು. ರೈತ ದೇಶದ ಬೆನ್ನೆಲುಬು, ಆಧಾರಸ್ಥಂಭ ಎಂದೆಲ್ಲಾ ಕರೆಯಲ್ಪಡುವ ರೈತನ ಸಾವು ನಿಜಕ್ಕೂ ವಿಷಾದನೀಯ. ರೈತರ ಆತ್ಮಹತ್ಯೆಯ ಪ್ರಕರಣಗಳು ಎಷ್ಟು ತೀವ್ರವಾಗಿವೆಯೆಂದರೆ 1997ರಿಂದ 2005ರ ಅವಧಿಯಲ್ಲಿ ಸರಾಸರಿ 32 ನಿಮಿಷಕ್ಕೆ ಒಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅಂದರೆ ಪ್ರತಿದಿನ 42 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ನ್ಯಾಷನಲ್ ಕ್ರೈಮ್ ರೆಕಾರ್ಡ್ಸ್ ಬ್ಯೂರೋ ಸಂಸ್ಥೆ (NCRB) ನೀಡಿರುವ ಅಂಕಿ–ಅಂಶದ ಪ್ರಕಾರ ಭಾರತದಲ್ಲಿ 2014ರಲ್ಲಿ 5650 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದರೆ, 2015ರಲ್ಲಿ 8007 ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಅದರಲ್ಲಿ ಅತಿ ಹೆಚ್ಚು ರೈತರ ಆತ್ಮಹತ್ಯೆ ಸಂಭವಿಸಿರುವುದು ಮಹಾರಾಷ್ಟ್ರದಲ್ಲಿ. ಹೀಗಾಗಿ ಮಹಾರಾಷ್ಟ್ರವನ್ನು 'ರೈತರ ಸ್ಮಶಾನ ಭೂಮಿ' ಎಂದು ಕರೆಯುತ್ತಾರೆ. ಈ ಅವಧಿಯಲ್ಲಿ ಮಹಾರಾಷ್ಟ್ರದಲ್ಲಿ 3030, ತೆಲಂಗಾಣದಲ್ಲಿ 1358, ಕರ್ನಾಟಕದಲ್ಲಿ 1197, ಛತ್ತೀಸ್‌ಗಡದಲ್ಲಿ 854, ಮಧ್ಯಪ್ರದೇಶದಲ್ಲಿ 581, ಆಂಧ್ರಪ್ರದೇಶದಲ್ಲಿ 516 ಪ್ರಕರಣಗಳು ಸಂಭವಿಸಿವೆ.

ಕರ್ನಾಟಕದಲ್ಲಿ ಏಪ್ರಿಲ್ 2008 ರಿಂದ ಏಪ್ರಿಲ್ 2012ರವರೆಗೆ ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ 1125 ಇದ್ದರೆ, 2013ರ ಏಪ್ರಿಲ್‌ನಿಂದ 2017ರ ನವೆಂಬರ್‌ವರೆಗಿನ ಅವಧಿಯಲ್ಲಿ 3515 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಪೈಕಿ 2525 ಆತ್ಮಹತ್ಯೆಗಳು ಬರ ಮತ್ತು ಬೆಳೆ ವೈಫಲ್ಯದ ಕಾರಣಕ್ಕಾಗಿ ನಡೆದಿವೆ ಎಂದು ರಾಜ್ಯದ ಕೃಷಿ ಇಲಾಖೆ ಒದಗಿಸಿರುವ ಅಂಕಿ–ಅಂಶಗಳು ಹೇಳುತ್ತವೆ.[5] ರೈತರ ಆತ್ಮಹತ್ಯೆ ಪಟ್ಟಿಯಲ್ಲಿ ಕಬ್ಬು ಬೆಳೆಗಾರರ ಸಂಖ್ಯೆ ಮೊದಲ ಸ್ಥಾನದಲ್ಲಿದ್ದರೆ, ತದನಂತರ ಹತ್ತಿ ಮತ್ತು ಭತ್ತದ ಬೆಳೆಗಾರರ ಪ್ರಕರಣಗಳಿವೆ ಎಂದು ಅಂಕಿ ಅಂಶಗಳು ಸ್ಪಷ್ಟಪಡಿಸುತ್ತವೆ. ಜಾಗತೀಕರಣದ ಪರಿಣಾಮದಿಂದ ಭಾರತದಾದ್ಯಂತ 1995 ರಿಂದ 2016ರ ವರೆಗೂ ದಾಖಲಾಗಿರುವ ರೈತರ ಆತ್ಮಹತ್ಯೆಗಳ ಸಂಖ್ಯೆ ಮೂರು ಲಕ್ಷಕ್ಕೂ ಹೆಚ್ಚಿದೆ.[6]

ಈ ಮೇಲ್ಕಂಡ ಎಲ್ಲಾ ಅಂಶಗಳಿಂದ ಇತ್ತೀಚಿನ ದಿನಗಳಲ್ಲಿ ರೈತರ ಆತ್ಮಹತ್ಯೆ ಪ್ರಮಾಣ ಹೆಚ್ಚುತ್ತಿರುವುದನ್ನು ಗಮನಿಸಬಹುದು. ರೈತರ ಆತ್ಮಹತ್ಯೆಗೆ ಕೇವಲ ಸಾಲಭಾದೆಯೊಂದೇ ಕಾರಣವಲ್ಲದೆ, ಇನ್ನೂ ಸಾಕಷ್ಟು ಕಾರಣಗಳಿವೆ. ಆದಾಯಕ್ಕಿಂತ ಖರ್ಚು ಹೆಚ್ಚಾಗಿರುವುದು ಅವರ ಎಲ್ಲಾ ಸಂಕಷ್ಟಗಳಿಗೆ ಮೂಲ ಕಾರಣವಾದರೆ, ಕೃಷಿಕರ ಜೀವನಶೈಲಿ, ಸಾಮಾಜಿಕ ಸ್ಥಿತಿಗತಿಗಳು, ಸರ್ಕಾರ ಮತ್ತು ಅಧಿಕಾರಿಗಳ ಧೋರಣೆಗಳು ಸೇರಿದಂತೆ ಇತರೆ ಹತ್ತಾರು ಕಾರಣಗಳಿವೆ. ಇಂತಹ ಸಂದಿಗ್ಧತೆಯಲ್ಲಿ ಅರ್ಥಿಕವಾಗಿ ತ್ರಿಶಂಕು ಸ್ಥಿತಿಯಲ್ಲಿರುವ ರೈತರನ್ನು ಸದೃಢಗೊಳಿಸಬೇಕಿದೆ. ಮುಖ್ಯವಾಗಿ ಎಂತಹ ಕಠಿಣ ಪರಿಸ್ಥಿತಿಯಲ್ಲೂ

ಆತ್ಮಹತ್ಯೆಯಂತಹ ಕಠೋರ ನಿಲುವನ್ನು ಕೈಗೊಳ್ಳದಿರುವಂತೆ ರೈತರಲ್ಲಿ ಆತ್ಮವಿಶ್ವಾಸ ತುಂಬುವ ಅಗತ್ಯತೆ ಇದೆ. ಪ್ರಪಂಚದಾದ್ಯಂತ ಪ್ರತಿವರ್ಷ ನಾನಾ ಕಾರಣಗಳಿಗಾಗಿ ಸುಮಾರು 8 ಲಕ್ಷ ಜನರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಭಾರತದಲ್ಲೂ ಇದರ ಪ್ರಮಾಣ ಹೆಚ್ಚಿದ್ದು, ರೈತರನ್ನೂ ಒಳಗೊಂಡಂತೆ ಬೇರೆ ಬೇರೆ ಯಾವುದೋ ಕಾರಣಗಳಿಗಾಗಿ ಆತ್ಮಹತ್ಯೆ ಮಾಡಿಕೊಳ್ಳುವವರ ಸಂಖ್ಯೆ ಒಂದು ಲಕ್ಷದಷ್ಟಿದೆ. ಈ ಹಿನ್ನೆಲೆಯಲ್ಲಿ ವಿಶ್ವದಾದ್ಯಂತ ಪ್ರತಿವರ್ಷ ಸೆಪ್ಟೆಂಬರ್ 10ರಂದು ವಿಶ್ವ ಆತ್ಮಹತ್ಯೆ ತಡೆ ದಿನವನ್ನಾಗಿ ಆಚರಿಸಲಾಗುತ್ತಿದೆ.[7]

**ರೈತರ ಆತ್ಮಹತ್ಯೆಗೆ ಕಾರಣ ಮತ್ತು ಪರಿಹಾರ**

**ನೀರಾವರಿ ಸೌಲಭ್ಯಗಳ ಕೊರತೆ**

ನಮ್ಮ ದೇಶದ ರೈತಾಪಿ ವರ್ಗ ಅನುಭವಿಸುತ್ತಿರುವ ಸಮಸ್ಯೆಗಳಲ್ಲಿ ನೀರಾವರಿ ಸೌಲಭ್ಯದ ಕೊರತೆ ಬಹಳ ಪ್ರಮುಖವಾದುದು. ನಮ್ಮ ದೇಶದಲ್ಲಿ ಬೃಹತ್ ಅಣೆಕಟ್ಟೆಗಳ ನಿರ್ಮಾಣದ ಹೊರತಾಗಿಯೂ ಶೇ.60ಕ್ಕೂ ಹೆಚ್ಚು ಒಣ ಭೂಮಿ ಇದೆ. ಕೆಲವೊಂದು ಸಂದರ್ಭಗಳಲ್ಲಿ ಅಣೆಕಟ್ಟೆಯ ಕಾಲುವೆಗಳ ಕೊನೆಯಂಚಿನಲ್ಲಿರುವ ಭೂಮಿಗೆ ನೀರು ತಲುಪದೆ ರೈತರು ಸಂಕಷ್ಟ ಅನುಭವಿಸುತ್ತಾರೆ. ಹೀಗಾಗಿ ಅಣೆಕಟ್ಟೆಗಳ ನಿರ್ಮಾಣದ ಜೊತೆಗೆ ಸಣ್ಣ ನೀರಾವರಿಗೂ ಹೆಚ್ಚಿನ ಆದ್ಯತೆ ನೀಡುವುದು, ನದಿಗಳಿಗೆ ಸಣ್ಣ ಸಣ್ಣ ಚೆಕ್ ಡ್ಯಾಮ್ ನಿರ್ಮಿಸುವುದು, ಹೆಚ್ಚು ನೀರು ಪೋಲಾಗದಂತೆ ತಡೆಯಲು ಹನಿ ನೀರಾವರಿ, ಸ್ಪಿಂಕ್ಲರ್ ಅಳವಡಿಕೆ ಮಾಡುವುದು, ಕೆರೆ–ಕುಂಟೆಗಳ ಹೂಳು ತೆಗೆದು ಹೆಚ್ಚು ನೀರು ಸಂಗ್ರಹವಾಗುವಂತೆ ಮಾಡುವುದು, ಮಳೆ ಆಶ್ರಿತ ಕೆರೆ ಅಚ್ಚುಕಟ್ಟು ಒತ್ತುವರಿಯಾಗದಂತೆ ತಡೆಯುವುದು ನಿಗಧಿತ ಅವಧಿಯೊಳಗೆ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುವುದು, ಮಳೆ ನೀರು ಸಂಗ್ರಹದ ವೈಜ್ಞಾನಿಕ ವಿಧಾನಗಳ ಬಗ್ಗೆ ರೈತರಿಗೆ ಶಿಕ್ಷಣ ನೀಡುವುದು, ಆ ಮೂಲಕ ಅಂತರ್ಜಲ ಹೆಚ್ಚಳವಾಗುವಂತೆ ಮಾಡುವುದು, ಪ್ರತಿ ಹಳ್ಳಿಗಳಲ್ಲಿ ಸಾಮಾಜಿಕ ಅರಣ್ಯಗಳನ್ನು ಬೆಳೆಸುವಂತೆ ಮಾಡಿ ಮಣ್ಣಿನ ಫಲವತ್ತತೆ ಹೆಚ್ಚಿಸುವುದು ಮತ್ತು ಭೂ ಸವಕಳಿ ತಡೆಯುವುದು.

**ಮಿಶ್ರ ಬೆಳೆ ಬೇಸಾಯದ ಪದ್ಧತಿ ಅಳವಡಿಕೆಯ ಕೊರತೆ**

ಒಂದೇ ಭೂ ಹಿಡುವಳಿಯಲ್ಲಿ ಹಲವು ಬೆಳೆಗಳನ್ನು ಒಟ್ಟಿಗೆ ಏಕಕಾಲದಲ್ಲಿ ಬೆಳೆಯುವುದೇ ಮಿಶ್ರ ಬೆಳೆ ಬೇಸಾಯ ಪದ್ದತಿ. ಈ ಬೆಳೆ ಪದ್ಧತಿಯಲ್ಲಿ ಒಂದು ಬೆಳೆ ಬರಲಿಲ್ಲವೆಂದರೆ ಮತ್ತೊಂದು ಬೆಳೆ ಬರುತ್ತದೆ. ರೈತರು ವರ್ಷಪೂರ್ತಿ ಆದಾಯ ಪಡೆಯಬೇಕಾದರೆ ಏಕಬೆಳೆ ಪದ್ಧತಿಗೆ ಬದಲಾಗಿ ಪರ್ಯಾಯ ಬೆಳೆಗಳಿಗೆ ಆದ್ಯತೆ ನೀಡಬೇಕು. ಏಕ ಬೆಳೆಯಿಂದ ಭೂಮಿಯ ಫಲವತ್ತತೆ ಕೂಡ ಬೇಗ ಕ್ಷೀಣಿಸುತ್ತದೆ. ಕಬ್ಬು ಮುಂತಾದ ವಾರ್ಷಿಕ ಬೆಳೆ ಬೆಳೆದು ಅದರ ಆದಾಯಕ್ಕೆಂದು ವರ್ಷವಿಡೀ ಕಾಯುವ ಬದಲು ಸರ್ವಋತು ಬೆಳೆಗಳನ್ನು ಬೆಳೆಯುವುದು, ಮಿಶ್ರ ಬೆಳೆ ಬೇಸಾಯದಲ್ಲಿ ಇವುಗಳ ಫಸಲು ಬೇರೆ ಬೇರೆ ಸಮಯದಲ್ಲಿ ಬರುವುದರಿಂದ ಆದಾಯ ನಿರಂತರವಾಗಿರುತ್ತದೆ. ಬೆಳೆಗಳ ಆಯ್ಕೆಯನ್ನು ಮಣ್ಣಿನ ಗುಣಮಟ್ಟ ಆಧರಿಸಿ ಮಾಡಿಕೊಳ್ಳುವುದು, ಈ ನಿಟ್ಟಿನಲ್ಲಿ ಕೃಷಿ ತಂತ್ರಜ್ಞರು, ತೋಟಗಾರಿಕೆ ಇಲಾಖೆಯ ವಿಜ್ಞಾನಿಗಳು ಮತ್ತು ಅಧಿಕಾರಿಗಳ ಸಲಹೆ ಪಡೆಯುವುದು.

**ಉತ್ತಮ ಗುಣಮಟ್ಟದ ಬಿತ್ತನೆ ಬೀಜ ಕ್ರಿಮಿಕೀಟನಾಶಕ ಮತ್ತು ರಸಗೊಬ್ಬರದ ಕೊರತೆ**

ನಮ್ಮ ದೇಶದಲ್ಲಿ ಹಲವಾರು ಬೀಜೋತ್ಪಾದನೆ ಮತ್ತು ರಸಗೊಬ್ಬರಗಳ ಕಂಪನಿಗಳಿವೆ. ಇವು ತಯಾರಿಸುವ ಉತ್ಪನ್ನಗಳು ದುಬಾರಿಯಾಗಿವೆ. ಆದಾಗ್ಯೂ ಇವು ಉತ್ತಮ ಗುಣಮಟ್ಟದಿಂದ ಕೂಡಿವೆ ಎಂಬುದರ ಬಗ್ಗೆ ಯಾವುದೇ ಖಾತ್ರಿ ಇಲ್ಲ. ಕಂಪನಿಗಳ ಜಾಹಿರಾತಿಗೆ ಮರುಳಾಗಿ ಅವುಗಳನ್ನು ಖರೀದಿಸುವ ರೈತರು ಅವು ನಕಲಿಯಾಗಿದ್ದಲ್ಲಿ, ಗುಣಮಟ್ಟದಿಂದ ಕೂಡಿಲ್ಲವಾದಲ್ಲಿ ಸಾಕಷ್ಟು ನಷ್ಟ ಅನುಭವಿಸಬೇಕಾಗುತ್ತದೆ. ಇದರೊಂದಿಗೆ ಬಿತ್ತನೆಯ ಸಮಯಕ್ಕೆ ಸರಿಯಾಗಿ ಮಾರುಕಟ್ಟೆಯಲ್ಲಿ ಬಿತ್ತನೆ ಬೀಜಗಳ ಅಭಾವ ಸೃಷ್ಟಿಸುವ ಕಾಳಸಂತೆಕೋರರ ಹಾವಳಿ ಬೇರೆ, ಹೀಗಾಗಿ ರೈತ ಭೂಮಿ ಹದಗೊಳಿಸುವ ಕೆಲಸ ಬಿಟ್ಟು ಪೇಟೆ ಪಟ್ಟಣಗಳಲ್ಲಿ ಬಿತ್ತನೆಬೀಜ, ಕೀಟನಾಶಕ ಮತ್ತು ಗೊಬ್ಬರಗಳಿಗಾಗಿ ದಿನಗಟ್ಟಲೇ ಅಲೆಯುವ ಸ್ಥಿತಿ ಇದೆ. ಸಕಾಲಕ್ಕೆ ಇವು ರೈತರಿಗೆ ತಲುಪುವಂತೆ ಮಾಡಿದರೆ ಅದೆಷ್ಟೊ ಆತ್ಮಹತ್ಯೆಗಳನ್ನು ತಡೆಯಬಹುದು. ಈ ಎಲ್ಲಾ ಸಮಸ್ಯೆಗಳಿಂದ ರೈತರನ್ನು ಮುಕ್ತಗೊಳಿಸಲು ಸರ್ಕಾರ ಬೀಜೋತ್ಪನ್ನ ಕಂಪನಿಗಳನ್ನು ನಿಯಂತ್ರಿಸಲು ಕಠಿಣ ಕಾನೂನುಗಳನ್ನು ಜಾರಿಗೊಳಿಸಬೇಕು. ಕಳಪೆ ಬೀಜಗಳಿಂದಾಗುವ ನಷ್ಟಕ್ಕೆ ಕಂಪನಿ ಜವಾಬ್ದಾರಿ ಹೊತ್ತು ಪರಿಹಾರ ನೀಡುವಂತೆ ಮಾಡಬೇಕು, ಇದು ಸಾಧ್ಯವಾಗದಿದ್ದಲ್ಲಿ ಬೀಜ ಮತ್ತು ಗೊಬ್ಬರ ತಯಾರಿಕೆಗಳನ್ನು ರಾಷ್ಟ್ರೀಕರಣಗೊಳಿಸಿ ಸರ್ಕಾರ ತಾನೇ ನೇರವಾಗಿ ರೈತರಿಗೆ ಸುಲಭ ದರದಲ್ಲಿ ಉತ್ಕೃಷ್ಟ ದರ್ಜೆಯ ಬಿತ್ತನೆ ಬೀಜ, ಗೊಬ್ಬರ ಕೀಟನಾಶಕಗಳನ್ನು ಒದಗಿಸಬೇಕು.[8]

**ಕೃಷಿ ಉತ್ಪನ್ನಗಳಿಗೆ ನ್ಯಾಯಯುತ ಬೆಲೆ ದೊರಕದಿರುವುದು**

ರೈತರು ತಾವು ಎದುರಿಸುತ್ತಿರುವ ಸಮಸ್ಯೆಗಳಲ್ಲಿ ಬಹು ಗಂಭೀರವಾದ ಸಮಸ್ಯೆ ಇದು. ತಮ್ಮೆಲ್ಲಾ ಸಂಕಷ್ಟಗಳ ನಡುವೆ ತಾವು ಬೆಳೆದ ಬೆಳೆಗೆ, ತನ್ನ ಬೆವರಿನ ಶ್ರಮಕ್ಕೆ ತಕ್ಕ ಬೆಲೆ ಸಿಗದೆ ರೈತರು ಹತಾಶರಾಗಿದ್ದಾರೆ. ರೈತರು ಆತ್ಮಹತ್ಯೆ ಮಾಡಿಕೊಂಡ ಬಳಿಕ ಅವರ ಕುಟುಂಬಕ್ಕೆ ಪರಿಹಾರ ಕೊಡುವ ಬದಲು ಅವರು ಬೆಳೆದ ಬೆಳೆಗೆ ಸರಿಯಾದ ಬೆಲೆ ನೀಡಿದ್ದರೆ ಪರಿಹಾರ ನೀಡುವ ಸಂದರ್ಭವೇ ಬರುತ್ತಿರಲಿಲ್ಲ. ಇಡೀ ವಿಶ್ವದಲ್ಲಿ ಒಂದು ಸಣ್ಣ ಉದ್ಯಮಿ ಕೂಡ ತಾನು ಉತ್ಪಾದಿಸಿದ ಉತ್ಪನ್ನಕ್ಕೆ ತಾನೇ ಬೆಲೆ ನಿಗದಿಪಡಿಸುವ ಕಾನೂನುಬದ್ಧ ಅಧಿಕಾರ ಹೊಂದಿದ್ದಾನೆ. ಆದರೆ ರೈತರಿಗೆ ಇಂತಹದೊಂದು ಹಕ್ಕು ಇಲ್ಲ. ರೈತ ಬೆಳೆದ ಕಬ್ಬಿಗೆ ಬೆಲೆ ನಿಗದಿ ಮಾಡುವವರು ಸಕ್ಕರೆ ಕಾರ್ಖಾನೆಯವರು, ಭತ್ತದ ಬೆಲೆ ನಿಗದಿ ಮಾಡುವವರು ಅಕ್ಕಿ ಗಿರಣಿ ಮಾಲೀಕರು, ಆದುದರಿಂದ ಈ ವ್ಯವಸ್ಥೆ ರದ್ದಾಗಬೇಕು. ರೈತರಿಗೆ ದೊರೆಯಬೇಕಾದ ನ್ಯಾಯಯುತ ಬೆಲೆ ದೊರೆಯಬೇಕು. ನಮ್ಮ ದೇಶದಲ್ಲಿ ಸಾಕಷ್ಟು ಅವಿದ್ಯಾವಂತ ರೈತರಿದ್ದು ಅವರಿಗೆ ತಾನು ಬೆಳೆದ ಬೆಳೆಗೆ ಮಾಡಿರುವ ಖರ್ಚು, ಹಾಕಿರುವ ಶ್ರಮ ಲೆಕ್ಕ ಹಾಕಿ ಬೆಲೆ ನಿಗದಿಪಡಿಸುವಷ್ಟು ಜಾಣ್ಮೆ ಇಲ್ಲ. ಹೀಗಾಗಿ ಸರ್ಕಾರವೇ ಆ ವರ್ಷದ ಮಾರುಕಟ್ಟೆಯ ಸೂಚ್ಯಾಂಕವನ್ನು ಆಧರಿಸಿ ರೈತ ಖರ್ಚು ಮಾಡಿರಬಹುದಾದ ಹಣ ಮತ್ತು ಶ್ರಮವನ್ನು ಲೆಕ್ಕ ಹಾಕಿ ನ್ಯಾಯಯುತ ಬೆಲೆ ನಿಗದಿಪಡಿಸಬೇಕು. ಪ್ರತಿ ತಾಲ್ಲೂಕಿನಲ್ಲೂ ಖರೀದಿ ಕೇಂದ್ರ ಸ್ಥಾಪಿಸಿ, ದಲ್ಲಾಳಿ ಮುಕ್ತ ಮಾರುಕಟ್ಟೆ ವ್ಯವಸ್ಥೆ ಜಾರಿಗೆ ತರಬೇಕು.[9]

**ಶೈತ್ಯಾಗಾರಗಳು ಮತ್ತು ದಾಸ್ತಾನು ಮಳಿಗೆಗಳ ಕೊರತೆ**

ಭಾರತದಲ್ಲಿ ರೈತರು ತಾವು ಬೆಳೆಯುವ ಬೆಳೆಗಳ ಪ್ರಮಾಣಕ್ಕೆ ಅನುಗುಣವಾಗಿ ದಾಸ್ತಾನು ಮಳಿಗೆಗಳು ಮತ್ತು ಶೈತ್ಯಾಗಾರಗಳ ಕೊರತೆ ಇದೆ. ಸರ್ಕಾರದ ಅಂಕಿ ಅಂಶಗಳ ಪ್ರಕಾರ ಶೇ.40–45ರಷ್ಟು ಬೆಳೆಗಳು ಶೈತ್ಯಾಗಾರದ ಕೊರತೆಯಿಂದ ಹಾಳಾಗುತ್ತಿವೆ. 2011ರಲ್ಲಿ ವಿಶ್ವಬ್ಯಾಂಕ್ ಭಾರತದ ಕೃಷಿ ಕ್ಷೇತ್ರ ಹಾಗೂ ರೈತರು ಎದುರಿಸುತ್ತಿರುವ ಸವಾಲುಗಳ ಕುರಿತು ಒಂದು ವರದಿ ನೀಡಿತು. ಅದರ ಪ್ರಕಾರ ಭಾರತದಲ್ಲಿ ಸರಿಯಾದ ದಾಸ್ತಾನು ವ್ಯವಸ್ಥೆ ಇಲ್ಲದೆ ಶೇ.30ರಷ್ಟು ಬೆಳೆ ನಾಶವಾಗುತ್ತಿದೆ ಎಂದು ಹೇಳಿದೆ. ಹೀಗಾಗಿ ಈ ನಿಟ್ಟಿನಲ್ಲಿ ನಮ್ಮ ಸರ್ಕಾರಗಳು ಯೋಚಿಸಿ ಕಾರ್ಯಪ್ರವೃತ್ತವಾಗಬೇಕು. ಕನಿಷ್ಟ ಪಕ್ಷ ಪ್ರತೀ ತಾಲ್ಲೂಕು ಕೇಂದ್ರಗಳಲ್ಲೂ ಅಲ್ಲಿ ಬೆಳೆಯುವ ಬೆಳೆಗಳಿಗನುಗುಣವಾಗಿ ಅಂದರೆ ಬೇಗ ಹಾಳಾಗುವ ಹಣ್ಣು, ತರಕಾರಿಗಳು ಬೆಳೆಯುವಲ್ಲಿ ಶೈತ್ಯಾಗಾರಗಳನ್ನು, ಕೊಳೆತು ಹೋಗದ ಬೆಳೆಗಳನ್ನು ಬೆಳೆಯುವಲ್ಲಿ ದಾಸ್ತಾನು ಮಳಿಗೆಗಳನ್ನು ತೆರೆಯುವುದು.

**ಕೃಷಿಗೆ ಪೂರಕವಾದ ಉದ್ದಿಮೆಗಳ ಕೊರತೆ**

ನಮ್ಮ ದೇಶದಲ್ಲಿ ಕೃಷಿಗೆ ಪೂರಕವಾದ ಉದ್ದಿಮೆಗಳ ಸಂಖ್ಯೆ ತೀರಾ ಕಡಿಮೆ ಇದೆ. ನಮ್ಮಲ್ಲಿ ಕೃಷಿ ಮಾರುಕಟ್ಟೆ ಸ್ಥಿರತೆ ಹೊಂದಿಲ್ಲ. ಕೆಲವೊಮ್ಮೆ ಕೃಷಿ ಉತ್ಪನ್ನಗಳ ಬೆಲೆಯಲ್ಲಿ ವಿಪರೀತ ಕುಸಿತ ಕಂಡುಬರುತ್ತದೆ. ಕೆಲವು ಸಂದರ್ಭಗಳಲ್ಲಿ ರೈತರು ಬೆಲೆ ಕುಸಿತದಿಂದ ನೊಂದು ತಾವು ಹಾಕಿರುವ ಬಂಡವಾಳವೂ ಸಿಗುವ ಭರವಸೆ ಇಲ್ಲದೆ ಹೆಚ್ಚಿನ ಖರ್ಚಿನ ಭಯದಿಂದ ತಾವು ಬೆಳೆದ ಬೆಳೆಯನ್ನು ಕಟಾವು ಮಾಡುವ ಗೋಜಿಗೆ ಹೋಗದೆ ಅವು ಮಣ್ಣುಪಾಲಾಗುತ್ತವೆ. ಈ ಸಂದರ್ಭಗಳಲ್ಲಿ ಆರ್ಥಿಕವಾಗಿ ರೈತರಿಗೆ ಅಪಾರ ನಷ್ಟ ಉಂಟಾಗುತ್ತದೆ. ಇಂತಹ ಪರಿಸ್ಥಿತಿಯಿಂದ ರೈತರನ್ನು ಪಾರು ಮಾಡಲು ಹೆಚ್ಚು ಹೆಚ್ಚು ಕೃಷಿಪೂರಕ ಉದ್ದಿಮೆಗಳನ್ನು ಸ್ಥಾಪಿಸಬೇಕು. ಹೆಚ್ಚು ಟೊಮೋಟೋ ಬೆಳೆಯುವ ತಾಲ್ಲೂಕುಗಳಲ್ಲಿ ಸಾಸ್, ಕೆಚಪ್ ಉದ್ದಿಮೆಗಳನ್ನು, ಹೆಚ್ಚು ಹಣ್ಣುಗಳನ್ನು ಬೆಳೆಯುವ ತಾಲ್ಲೂಕುಗಳಲ್ಲಿ ಜಾಮ್, ಹಣ್ಣಿನ ರಸ ಉತ್ಪಾದಿಸುವ ಉದ್ದಿಮೆಗಳನ್ನು, ಶೇಂಗಾ ಬೆಳೆಯುವಲ್ಲಿ ಶೇಂಗಾ ಎಣ್ಣೆ ಉತ್ಪಾದಿಸುವ ಉದ್ದಿಮೆಗಳು ಮುಂತಾದ ಪೂರಕ ಉದ್ದಿಮೆಗಳನ್ನು ಸ್ಥಾಪಿಸಬೇಕು. ಈ ದಿಸೆಯಲ್ಲಿ ಸರ್ಕಾರ ಪ್ರಯತ್ನ ಮಾಡುವುದರ ಜೊತೆಗೆ ಖಾಸಗಿಯವರಿಗೂ ಪ್ರೋತ್ಸಾಹ ನೀಡಿ ಉತ್ತೇಜಿಸಬೇಕು. ಇದರೊಂದಿಗೆ ಕೃಷಿಯ ಉಪಕಸುಬುಗಳಾದ ಹೈನುಗಾರಿಕೆ, ಜೇನು, ಮೀನು, ಕೋಳಿ ಸಾಕಾಣಿಕೆ, ಅಣಬೆ ಕೃಷಿ ಮೊದಲಾದವುಗಳಿಗೆ ಉತ್ತೇಜನ ನೀಡುವುದು. ಇದರಿಂದ ರೈತರು ಆರ್ಥಿಕ ಸ್ವಾವಲಂಬಿಗಳಾಗುವುದರೊಂದಿಗೆ ಸ್ಥಳೀಯರಿಗೆ ಉದ್ಯೋಗವಕಾಶಗಳು ಹೆಚ್ಚಿ, ಸರ್ಕಾರಕ್ಕೆ ತೆರಿಗೆಯೂ ದೊರೆಯುತ್ತದೆ.

**ಖಾಸಗಿ ಲೇವಾದೇವಿಗಾರರ ಕಿರುಕುಳ**

ರೈತರಿಗೆ ಕೃಷಿಸಲುವಾಗಿ ಅಂದರೆ ಭೂಮಿಯನ್ನು ಹದಗೊಳಿಸಲು ಬಿತ್ತನೆ ಬೀಜ, ರಸಗೊಬ್ಬರ, ಕೀಟನಾಶಕಗಳ ಖರೀದಿ, ಬಿತ್ತನೆ, ಒಕ್ಕಣೆ, ಆಳುಗಳಿಗೆ ಕೂಲಿ ಮುಂತಾದ ಕೃಷಿ ಚಟುವಟಿಕೆಗಳಿಗೆ ಹಣದ ಅಗತ್ಯ ಇರುತ್ತದೆ. ಆಗ ಹಣಕ್ಕಾಗಿ ಅವರು ಮೊದಲು ತೆರಳುವುದು ಸ್ಥಳೀಯ ಖಾಸಗಿ ಲೇವಾದೇವಿಗಾರರ ಬಳಿಗೆ. ಏಕೆಂದರೆ ನಮ್ಮ ಬ್ಯಾಂಕುಗಳು, ಹಣಕಾಸು ಸಂಸ್ಥೆಗಳು ಕೇಳುವ ದಾಖಲೆ, ಒಪ್ಪಂದ,

ಷರತ್ತುಗಳನ್ನು ಪೂರೈಸುವುದು ಸಣ್ಣ ಮತ್ತು ಮಧ್ಯಮ ರೈತರಿಗೆ ತುಂಬಾ ಕಷ್ಟ. ಜೊತೆಗೆ ಸರ್ಕಾರಿ ಬ್ಯಾಂಕುಗಳು ಸಾಲ ನೀಡುವುದು ಹಣವಂತರಿಗೆ ಮಾತ್ರ ಎಂಬ ಅಪವಾದ ಬೇರೆ. ಅದಕ್ಕೂ ಲಂಚ ನೀಡಬೇಕು, ವಿಳಂಬ ನೀತಿ ಸಹಿಸಿಕೊಳ್ಳಬೇಕು ಎಂಬ ಭಾವನೆ ಇದೆ. ಹೀಗಾಗಿ ಖಾಸಗಿ ಲೇವಾದೇವಿಗಾರರ ಬಳಿ ಸಾಲ ಮಾಡುವ ರೈತರು, ನಿರೀಕ್ಷಿತ ಇಳುವರಿ ಮತ್ತು ಬೆಲೆ ಬಾರದಿದ್ದಾಗ ಸಾಲ ತೀರಿಸಬೇಕಾದ ಒತ್ತಡ ಮತ್ತು ಸಾಲಗಾರರ ಕಿರುಕುಳದಿಂದ ಬೇಸತ್ತು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಇದರಿಂದ ರೈತರನ್ನು ಮುಕ್ತಗೊಳಿಸಬೇಕಾದರೆ ಸಮಗ್ರ ಕೃಷಿಸಾಲ ನೀತಿ ರೂಪಿಸಬೇಕು. ಆ ಮೂಲಕ ಬಡ್ಡಿರಹಿತ ಅಥವಾ ಕಡಿಮೆ ಬಡ್ಡಿಗೆ ಕೃಷಿ ಸಾಲ ನೀಡಬೇಕು.

**ಮಧ್ಯವರ್ತಿಗಳ ಹಾವಳಿ**

ನಮ್ಮ ದೇಶದ ಎಲ್ಲಾ ಹಂತದ ಮಾರುಕಟ್ಟೆಗಳಲ್ಲೂ ದಲ್ಲಾಳಿಗಳು ಅಥವಾ ಮಧ್ಯವರ್ತಿಗಳ ಹಾವಳಿ ಹೆಚ್ಚಿದೆ. ಗ್ರಾಹಕರು ಮಾರುಕಟ್ಟೆಯಲ್ಲಿ ಖರೀದಿಸುವ ಕೃಷಿ ಉತ್ಪನ್ನಗಳ ಬೆಲೆಯಲ್ಲಿ ಬೆಳೆದ ರೈತರಿಗೆ ಸಿಗುವ ಹಣ ಶೇ.10ರಿಂದ 23ರ ವರೆಗೆ ಮಾತ್ರ. ಉಳಿದ ಹಣ ಮಧ್ಯವರ್ತಿಗಳು ಮತ್ತು ವ್ಯಾಪಾರಿಗಳ ಪಾಲಾಗುತ್ತದೆ. ಅದೇ ಯುರೋಪ್ ಹಾಗೂ ಅಮೇರಿಕಾದ ರೈತರು ಶೇ.64 ರಿಂದ 81ರಷ್ಟು ಹಣ ಪಡೆಯುತ್ತಾರೆ. ಈ ಕಾರಣದಿಂದಲೇ ಭಾರತೀಯ ರೈತರು ಇಂದಿಗೂ ಸಹ ನಷ್ಟದಲ್ಲೇ ಕೃಷಿ ಮಾಡುವ ಪರಿಸ್ಥಿತಿ ಇದೆ. ಆದುದರಿಂದ ರೈತರನ್ನು ಹಾಗೂ ಕೃಷಿ ಮಾರುಕಟ್ಟೆಗಳನ್ನು ಮಧ್ಯವರ್ತಿಗಳ ಹಾವಳಿಯಿಂದ ಮುಕ್ತಗೊಳಿಸಿ ಮಾರುಕಟ್ಟೆ ವ್ಯವಸ್ಥೆಯನ್ನು ಬಲಪಡಿಸಬೇಕು.

**ಅಪ್ರಯೋಜಕ ಬೆಂಬಲ ಬೆಲೆ ಹಾಗೂ ಬೆಳೆ ಪರಿಹಾರ ನೀತಿ**

ಬೆಲೆ ಕುಸಿತದ ಸಂದರ್ಭದಲ್ಲಿ ಸರ್ಕಾರ ರೈತರ ಒತ್ತಡಕ್ಕೆ ಮಣಿದು ಬೆಂಬಲ ಬೆಲೆಯನ್ನೇನೋ ನೀಡುತ್ತದೆ. ಆದರೆ ಆ ಬೆಂಬಲ ಬೆಲೆಯಿಂದ ರೈತ ಕೃಷಿಗಾಗಿ ಮಾಡಿದ ಖರ್ಚು ಸಿಗುವುದೆ? ಖರ್ಚು ಕಳೆದು ಉಳಿದ ಹಣದಲ್ಲಿ ಆತ ವರ್ಷಪೂರ್ತಿ ಊಟ ಮಾಡಬಹುದೆ? ಎಂದರೆ ಇಲ್ಲ, ಬೆಂಬಲ ಬೆಲೆ ಯೋಜನೆಯಲ್ಲಿ ಉತ್ಕೃಷ್ಟ ಗುಣಮಟ್ಟದ ಬೆಳೆಗಳನ್ನು ಮಾತ್ರ ಖರೀದಿಸಿ ಇನ್ನುಳಿದಿದ್ದನ್ನು ತಿರಸ್ಕರಿಸುವುದೂ ಇದೆ. ಈ ವ್ಯವಸ್ಥೆಯನ್ನು ಸರಿಪಡಿಸಬೇಕಿದೆ. ಇನ್ನು ಪ್ರಕೃತಿ ವಿಕೋಪ, ಪ್ರಾಣಿ, ಪಕ್ಷಿಗಳ ಉಪಟಳದಿಂದ ಬೆಳೆ ನಷ್ಟವಾದಲ್ಲಿ ನೀಡುವ ಬೆಲೆ ಪರಿಹಾರ ಆನೆ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯಂತಿರುತ್ತದೆ. ಅದನ್ನು ಪಡೆಯಲು ಕಛೇರಿಯಿಂದ–ಕಛೇರಿಗೆ ಅಲೆದಾಡುವಷ್ಟರಲ್ಲಿ ರೈತ ಅರೆಜೀವವಾಗಿರುತ್ತಾನೆ. ಆದುದರಿಂದ ಸರ್ಕಾರ ಖಾತರಿ ಬೆಂಬಲ ಬೆಲೆ ಮತ್ತು ಸಮರ್ಪಕ ಬೆಳೆ ಪರಿಹಾರ ನೀತಿಯನ್ನು ಜಾರಿಗೆ ತರುವ ಮೂಲಕ ರೈತರ ನೆರವಿಗೆ ಧಾವಿಸಬೇಕು.

**ಬೆಳೆ ವಿಮೆ ನೀತಿ ಅಳವಡಿಕೆಯ ಬಗ್ಗೆ ಅರಿವಿಲ್ಲದಿರುವುದು**

ನಮ್ಮ ದೇಶದ ರೈತರಲ್ಲಿ ಬಹುತೇಕರು ಅನಕ್ಷರಸ್ಥರಾಗಿದ್ದು ಅವರಿಗೆ ಬೆಳೆ ವಿಮೆಯ ಅರಿವಿಲ್ಲ. ಹಾಗಾಗಿ ಸರ್ಕಾರ ರೈತ ಹಾಗೂ ಆತನ ಬೆಳೆಗಳಿಗೆ ವಿಮೆ ಮಾಡಿಸುವಂತೆ ಪ್ರೋತ್ಸಾಹಿಸಬೇಕು. ಇದರಿಂದ ಬೆಲೆ ನಷ್ಟ ಹಾಗೂ ಬೆಳೆ ನಷ್ಟ ಮುಂತಾದವುಗಳಿಂದ ಆಗುವ ನಷ್ಟಕ್ಕೆ ವಿಮಾ ಕಂಪನಿ ನೆರವಾಗುವುದರಿಂದ ರೈತರು ಆರ್ಥಿಕವಾಗಿ ನಷ್ಟ ಅನುಭವಿಸುವ ಭಯ ಇರುವುದಿಲ್ಲ.

**ಮಿತಿ ಮೀರಿದ ನಗರ ಪಟ್ಟಣಗಳ ಬೆಳವಣಿಗೆ ಪ್ರಭಾವ**

ನಗರ ಪಟ್ಟಣಗಳಲ್ಲಿ ದಿನದಿಂದ ದಿನಕ್ಕೆ ಮಿತಿ ಮೀರಿ ಜನಸಂಖ್ಯೆ ಹೆಚ್ಚುತ್ತಿದೆ. ಹೀಗಾಗಿ ನಗರಗಳ ಸುತ್ತಮುತ್ತಲ ಕೃಷಿಭೂಮಿ ನಿವೇಶನಗಳಾಗಿ ಪರಿವರ್ತಿತವಾಗುತ್ತಿದೆ. ತಾಲ್ಲೂಕು, ಜಿಲ್ಲಾ ಕೇಂದ್ರಗಳ ಸುತ್ತಲಿನ ಫಲವತ್ತಾದ ಭೂಮಿ ಅನ್ಯ ಉದ್ದೇಶಕ್ಕಾಗಿ ಬಳಕೆಯಾಗುತ್ತಿದೆ. ಆಗಿದ್ದಾಗ್ಗೆ ಸರ್ಕಾರಗಳು ಜಾಗತಿಕ ಹೂಡಿಕೆದಾರರ ಸಮಾವೇಶ ನಡೆಸುತ್ತಾ, ಉದ್ಯೋಗ ಸೃಷ್ಟಿಯ ಸೋಗಿನಲ್ಲಿ ಸಾವಿರಾರು ಎಕರೆ ಫಲವತ್ತಾದ ಭೂಮಿಯನ್ನು ರೈತರಿಂದ ಕಸಿದುಕೊಂಡು ಉದ್ಯಮಪತಿಗಳಿಗೆ ನೀಡುತ್ತಿದೆ. ಆದುದರಿಂದ ರೈತರು ಭೂರಹಿತರಾಗಿ ಕೃಷಿ ಉತ್ಪಾದನೆ ದಿನದಿಂದ–ದಿನಕ್ಕೆ ಕುಸಿಯುತ್ತಿದೆ. ಆದುದರಿಂದ ಸರ್ಕಾರ ಈಗಲಾದರೂ ಜಾಗೃತಗೊಂಡು ನಗರ ಪಟ್ಟಣಗಳ ಬೆಳವಣಿಗೆಗೆ ಕಡಿವಾಣ ಹಾಕಬೇಕು. ರಿಯಲ್ ಎಸ್ಟೇಟ್ ಮಾಫಿಯಾವನ್ನು ನಿಯಂತ್ರಿಸಬೇಕು. ಹಸಿರುಪಟ್ಟಿ ಗುರುತು ನಿಗದಿ ಮಾಡುವುದರ ಮೂಲಕ ಅನ್ಯಕಾರ್ಯಕ್ಕೆ ಕೃಷಿಭೂಮಿಯ ದುರ್ಬಳಕೆ ತಡೆಯಬೇಕು. ಅತೀ ಹೆಚ್ಚು ಉದ್ಯೋಗವನ್ನು ಕೃಷಿವಲಯ ಸೃಷ್ಟಿಸಬಲ್ಲದು ಎಂಬ ಸಾಮಾನ್ಯ ಪರಿಕಲ್ಪನೆ ಇಲ್ಲದ ಸರ್ಕಾರಗಳು ಈಗಲಾದರೂ ಎಚ್ಚೆತ್ತುಗೊಂಡು ಈ ವಲಯವನ್ನು ಅಭಿವೃದ್ಧಿಪಡಿಸಿದ್ದಲ್ಲಿ ಹಾಗೂ ಕೃಷಿ ಕ್ಷೇತ್ರವನ್ನು ಒಂದು ಉದ್ಯಮವನ್ನಾಗಿ ಪರಿಗಣಿಸಿದ್ದಲ್ಲಿ ಮಹತ್ತರ ಬದಲಾವಣೆ ಸಾಧ್ಯ.

**ರೈತರಲ್ಲಿ ಆತ್ಮವಿಶ್ವಾಸದ ಕೊರತೆ**

ಇಂದು ರೈತರು ಕೃಷಿಯೆಂಬ ವಿಷವರ್ತುಲದೊಳಗೆ ಸಿಲುಕಿ ನರಳುತ್ತಿದ್ದಾರೆ. ಯಾವುದೋ ಕಂಪನಿಯ ಮೋಸ, ಬ್ಯಾಂಕುಗಳ ಸುಲಿಗೆ, ಅತಿಯಾದ ಸುಂಕ, ನ್ಯಾಯಯುತ ಬೆಲೆ ಸಿಗದಿರುವುದು, ಹವಾಮಾನದ ವೈಪರಿತ್ಯ, ಸರ್ಕಾರದ ರೈತ ವಿರೋಧಿ ಧೋರಣೆಗಳು ಮುಂತಾದ ಹತ್ತು ಹಲವು ಕೃಷಿ ಸಂಬಂಧಿತ ಸಮಸ್ಯೆಗಳಲ್ಲಿ ಸಿಲುಕಿ ಜೀವನದಲ್ಲಿ ಬದುಕುವ ಭರವಸೆ ಇಲ್ಲದೆ ಆತ್ಮಹತ್ಯೆಯ ಹಾದಿ ಹಿಡಿಯುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಅವರಲ್ಲಿ ಆತ್ಮಸ್ಥೈರ್ಯ ತುಂಬಬೇಕು. ಈ ನಿಟ್ಟಿನಲ್ಲಿ ಸಮಾಜ, ಸರ್ಕಾರ, ಜನಪ್ರತಿನಿಧಿಗಳು, ಅಧಿಕಾರಿಗಳು, ರೈತರ ಬೆನ್ನಿಗೆ ನಿಂತು ಅವರಲ್ಲಿ ಆತ್ಮವಿಶ್ವಾಸ ಮೂಡಿಸಬೇಕು. ರೈತರಿಗೆ ಕೌಶಲ್ಯಾಧಾರಿತ ತರಬೇತಿ ನೀಡಿ ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡಬೇಕು. ಪೊಳ್ಳು ಆಶ್ವಾಸನೆಗಳಾದ ಸಾಲಮನ್ನಾ, ಉಚಿತ ಯೋಜನೆಗಳ ಬದಲು ಆತ ಸಮಾಜದಲ್ಲಿ ಗೌರವಯುತವಾಗಿ ಬದುಕಲು ಬೇಕಾದ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸಬೇಕು. ಆ ಮೂಲಕ ರೈತರ ಮನೋಬಲ ಹೆಚ್ಚಿಸಿ ಅವರಲ್ಲಿ ಜೀವನೋತ್ಸಾಹ ತುಂಬಿ ಬದುಕುವ ಆತ್ಮವಿಶ್ವಾಸ ಮೂಡಿಸಬೇಕಿದೆ.

**ಉಪಸಂಹಾರ**

ಈ ಮೇಲ್ಕಂಡ ಸಮಸ್ಯೆಗಳಷ್ಟೇ ಅಲ್ಲದೆ ಜಾಗತೀಕರಣದ ನೀತಿಗಳು, ಕೌಟುಂಬಿಕ ನಿರ್ವಹಣೆಯ ಒತ್ತಡ, ಅವೈಜ್ಞಾನಿಕ ಸಾಗುವಳಿ ಪದ್ಧತಿಯ ಅನುಸರಣೆ, ವಾಣಿಜ್ಯ ಬೆಳೆಗಳ ಮೇಲಿನ ಹೆಚ್ಚಿನ ಅವಲಂಬನೆ, ಕೊಳವೆ ಬಾವಿ ವೈಫಲ್ಯದಿಂದಾದ ಸಾಲದ ಹೊರೆ, ಅಸಮರ್ಪಕ ವಿದ್ಯುತ್ ಪೂರೈಕೆ, ಸರ್ಕಾರದ ಕೃಷಿ ನಿರ್ಲಕ್ಷ್ಯ ಧೋರಣೆಗಳು, ಅಧಿಕಾರಶಾಹಿಯ ಆಲಸ್ಯ, ತಾಂತ್ರಿಕ ತೊಡಕುಗಳು, ಭ್ರಷ್ಟಾಚಾರ ಮುಂತಾದ ಸಮಸ್ಯೆಗಳನ್ನು ರೈತ ಕುಲ ಎದುರಿಸುತ್ತಿದ್ದು ಅವುಗಳಿಗೆ ಸೂಕ್ತ

ಪರಿಹಾರೋಪಾಯಗಳನ್ನು ಒದಗಿಸಬೇಕು. ಸಾಲಮನ್ನಾ ಒಂದೇ ಎಲ್ಲದಕ್ಕೂ ಪರಿಹಾರವಲ್ಲ. ರೈತರು ಸಾಲ ಮಾಡದಂತೆ ಅವರನ್ನು ಸ್ವಾವಲಂಬಿಗಳನ್ನಾಗಿಸುವತ್ತ ಸರ್ಕಾರದ ಯೋಜನೆಗಳಿರಬೇಕು, ಹೀಗಾದಲ್ಲಿ ರೈತರು ಆತ್ಮಹತ್ಯೆಯಂತಹ ಕಠಿಣ ನಿರ್ಧಾರದಿಂದ ದೂರ ಉಳಿಯಲು ಸಾಧ್ಯ. ಈ ನಿಟ್ಟಿನಲ್ಲಿ ನಮ್ಮ ಸಮಾಜ ಮತ್ತು ಸರ್ಕಾರಗಳು ಚಿಂತಿಸುವ ಅಗತ್ಯತೆ ಇದೆ.

---

**ಕೊನೆ ಟಿಪ್ಪಣಿಗಳು**

1 ವೆಂಕಟರಾವ್, ಡಿ. (2000). ಕೃಷಿ ಅರ್ಥಶಾಸ್ತ್ರ. ಲಕ್ಷ್ಮಿ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು, ಪು.ಸಂ.5.

2 ಮೊಗಳ್ಳಿ ಗಣೇಶ್ (ಸಂ), (2009). ಉರಿದಾವೊ ನೇಗಿಲು. ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.ಸಂ.77–78.

3 ಚಲಪತಿ ಆರ್. ಮತ್ತು ವಿಠ್ಠಲ್ ಭಂಡಾರಿ (ಸಂ.), (2017). ರೈತ ಕಾರ್ಮಿಕ ಓದು. ಸಂಪುಟ–4, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪು.ಸಂ.26.

4 ಮೇಲಿನದೇ., ಪು.ಸಂ.27.

5 ಕನ್ನಡ ಪ್ರಭ ದಿನಪತ್ರಿಕೆ, ಜನವರಿ 06. 2017, ಬೆಂಗಳೂರು.

6 ಚಂದ್ರಶೇಖರ್ ಎಸ್. ಮತ್ತು ಸುರೇಂದ್ರರಾವ್ ಬಿ. (ಸಂ.), (2016). ಕರ್ನಾಟಕ ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆಯ ಕೆಲವು ನೆಲೆಗಳು. ಸಂಪುಟ–9, ಕುವೆಂಪು ಭಾಷಾ ಭಾರತಿ, ಬೆಂಗಳೂರು. ಪು.ಸಂ.278.

7 ವಿಜಯ ಕರ್ನಾಟಕ ದಿನಪತ್ರಿಕೆ, ಸೆಪ್ಟೆಂಬರ್ 10, 2017. ಬೆಂಗಳೂರು.

8 ಸೂರಿ ಕೆ.ಸಿ., (2006). ರೈತರ ಆತ್ಮಹತ್ಯೆಗಳಿಗೆ ಕಾರಣಗಳೇನು. ನವಕರ್ನಾಟಕ ಪ್ರಕಾಶನ. ಬೆಂಗಳೂರು, ಪು.ಸಂ.5.

9 ಕುಮಾರಸ್ವಾಮಿ ಎ.ಎಸ್. (2016). ರೈತರ ಆತ್ಮಹತ್ಯೆಯ ಒಂದು ಮನೋ–ಸಾಮಾಜಿಕ ವಿಶ್ಲೇಷಣೆ ಮತ್ತು ಸಮಗ್ರ ಕೃಷಿ ನೀತಿಯ ಚಿಂತನೆ. ಸಪ್ನ ಬುಕ್ ಹೌಸ್, ಬೆಂಗಳೂರು. ಪು.ಸಂ.153–155.

**ಪರಾಮರ್ಶನ ಗ್ರಂಥಗಳು**


- ಚಂದ್ರಶೇಖರ್. ಎ.ಪಿ. (2014). ಅನ್ನದಾತನ ಆತ್ಮಹತ್ಯೆ. ವಿಸ್ಮಯ ಪ್ರಕಾಶನ, ಮೈಸೂರು.
- ಕುಮಾರ್ ಕೆ.ಎಂ. (2008). ಕರ್ನಾಟಕದಲ್ಲಿನ ರೈತ ಚಳುವಳಿ. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
- ಕೃಷ್ಣಯ್ಯ ಗೌಡ ಎಚ್.ಆರ್. (2015). ಪ್ರೌಢ ಅಭಿವೃದ್ಧಿ ಅರ್ಥಶಾಸ್ತ್ರ. ವಿದ್ಯಾನಿಧಿ ಪ್ರಕಾಶನ, ಗದಗ.
- ನಂಜುಂಡಸ್ವಾಮಿ ಎಂ.ಡಿ. (2000). ರೈತ ಚಳವಳಿ 2000 ಮತ್ತೆ ಪರ್ಯಾಯ ಸರ್ಕಾರದೆಡೆಗೆ. ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರುಸೇನೆ.

- ಬಿಪಿನ್ ಚಂದ್ರ. (1999). ಇಂಡಿಯಾ ಆಫ್ಟರ್ ಇಂಡಿಪೆಂಡೆನ್ಸ್. ವೈಕಿಂಗ್ ಪೆಂಗ್ವಿನ್, ನ್ಯೂಡೆಲ್ಲಿ.
- ಮುಜಾಫರ್ ಎಚ್. ಅಸಾದಿ. (1997) ಪೆಸೆಂಟ್ ಮೂವ್‌ಮೆಂಟ್ ಇನ್ ಕರ್ನಾಟಕ 1980–1994. ಶಿಪ್ರ ಪಬ್ಲಿಕೇಷನ್, ನ್ಯೂಡೆಲ್ಲಿ.
- ವೀರಸಂಗಯ್ಯ ಜೆ.ಎಂ. (2007). ರೈತರ ಆತ್ಮಹತ್ಯೆ ತಡೆ ಹೇಗೆ. ಕರ್ನಾಟಕ ರಾಜ್ಯ ರೈತಸಂಘ, ಬಳ್ಳಾರಿ.
- ಶಿವರಾಮಯ್ಯ. (2007). ಕತ್ತಿ ಯಾವುದಾದರೇನು. ನವ ಕರ್ನಾಟಕ ಪ್ರಕಾಶನ, ಬೆಂಗಳೂರು.
- ಶಿವಸುಂದರ್. (2010). ರೈತರ ಆತ್ಮಹತ್ಯೆ ಜಾಗತೀಕರಣದ ಉರುಳಿಗೆ ರೈತರ ಕೊರಳು. ಲಂಕೇಶ್ ಪ್ರಕಾಶನ, ಬೆಂಗಳೂರು.


**ವಕ್ತೃ ವಿವರ**

1. ಅನಸೂಯಮ್ಮ. ರೈತಪರ ಹೋರಾಟಗಾರರು, ಚೆನ್ನಪಟ್ಟಣ. ದಿನಾಂಕ: 01.01.2019.
2. ಕೋಡಿಹಳ್ಳಿ ಚಂದ್ರಶೇಖರ್. ಅಧ್ಯಕ್ಷರು, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರುಸೇನೆ, ಬೆಂಗಳೂರು. ದಿನಾಂಕ: 18.12.2018.
3. ವೀರಸಂಗಯ್ಯ, ಜೆ.ಎಂ. ಕಾರ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರುಸೇನೆ, ಬೆಂಗಳೂರು. ದಿನಾಂಕ: 14.02.2019.

IIMRD JOURNALS